ಗ್ರಾಹಕರ ಸಹಕರ ಮಹಾಮಂಡಳಿ ನಿಯಮಿತ ಹಾಗೂ ಅಕ್ಕಿ ಗಿರಣಿ ಮಾಲೀಕರ ಸಹಯೋಗದೊಂದಿಗೆ ಕಾರ್ಯಕ್ರಮವನ್ನು ಹಮ್ಮಿಕೊಂಡು, ಅಕ್ಕಿ ಗಿರಣಿ ಮಾಲೀಕರು ನೇರವಾಗಿ ಜನತಾ ಬಜಾರ್‌ಗಳಿಗೆ ಸರಬರಾಜು ಮಾಡಿ ಮಧ್ಯವರ್ತಿಗಳ ಹಾವಳಿ ಇಲ್ಲದೆ ಸಾರ್ವಜನಿಕರ ಕಡಿಮೆ ದರದಲ್ಲಿ ಅಕ್ಕಿಯು ದೊರೆಯುವಂತೆ, ಬೆಂಗಳೂರಿನ 7 ಜನತಾ ಬಜಾರ್ ಮೂಲಕ ಅಕ್ಕಿಯನ್ನು ಮಾರಾಟ ಮಾಡಲಾಯಿತು. ಸದರಿ ಯೋಜನೆಯಲ್ಲಿ 359.6 ಮೆ.ಟನ್. ಅಕ್ಕಿಯನ್ನು ಗ್ರಾಹಕರಿಗೆ ದಿ: 24–10–2009ರ ವರೆಗೆ ವಿತರಿಸಲಾಗಿದೆ.

ರೈತರ ಸಂತೆ ಯೋಜನೆಯ ಅನುಷ್ಠಾನ

985 (1523) ಶ್ರೀ ಹ್ಯಾರಿಸ್ ಎನ್ ಎ (ಶಾಂತಿ ನಗರ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಕಡೆಗಳಲ್ಲಿ ರೈತರ ಸಂತೆಯ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗಿದೆ?

ಆ) ಕಳೆದ 2 ವರ್ಷಗಳಲ್ಲಿ ನಬಾರ್ಡ್ ಯೋಜನೆಯ ಮೂಲಕ ಪಡೆಯಲಾದ ಅನುದಾನದ ಮೊತ್ತ ಎಷ್ಟು?

ಇ) ವಿವಿಧ ಯೋಜನೆಗಳ ಜಾರಿಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಂದ ಪಡೆದ ಹಾಗೂ ವೆಚ್ಚ ಮಾಡಿದ ಅನುದಾನಗಳ ವಿವರಗಳೇನು?

ಶ್ರೀ ಶಿವರಾಜ್ ಎಸ್. ತಂಗಡಗಿ (ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು) :

ಅ) ರಾಜ್ಯದಲ್ಲಿ ಒಟ್ಟು 14 ಕಡೆಗಳಲ್ಲಿ ರೈತರ ಸಂತೆಯ ಕಾರ್ಯಕ್ರಮಗಳನ್ನು ಅನುಷ್ಠಾನ ಗೊಳಿಸಲಾಗಿದೆ. ವಿವರಗಳನ್ನು ಅನುಬಂಧ–1 ರಲ್ಲಿ ಲಗತ್ತಿಸಿದೆ.

ಆ) ಅನುಬಂಧ–2 ರಲ್ಲಿ ಲಗತ್ತಿಸಿದೆ.

ಇ) ಅನುಬಂಧ–3 ರಲ್ಲಿ ಲಗತ್ತಿಸಿದೆ.

ಅನುಬಂಧ – 1
ರೈತರ ಸಂತೆ

(ರೂ.ಲಕ್ಷಗಳಲ್ಲಿ)

ಕ್ರ ಸಂ.	ಕೃ.ಉ.ಮಾ.ಸ. ಹೆಸರು	ರೈತರ ಸಂತೆ ನಿರ್ಮಾಣದ ಸ್ಥಳ	ಅಂದಾಜು ಮೊತ್ತ	ವೆಚ್ಚ	ಪರಾ
1	ಬೆಂಗಳೂರು	ಯಲಹಂಕ	40.00	38.00	ಕಾರ್ಯನಿರ್ವಹಿಸುತ್ತಿದೆ.
2	ಹ.ಮ.ತ ಬೆಂಗಳೂರು	ಬಿನ್ನಿಪೇಟೆ	13.00	12.09	ಸ್ಥಗಿತಗೊಂಡಿದೆ
3	ಚಿತ್ರದುರ್ಗ	ಚಿತ್ರದುರ್ಗ	30.00	30.32	ಸ್ಥಗಿತಗೊಂಡಿದೆ.
4	ಮದ್ದೂರು	ಮದ್ದೂರು	30.00	31.50	ಕಾರ್ಯನಿರ್ವಹಿಸುತ್ತಿದೆ
5	ಹುಬ್ಬಳ್ಳಿ	ಹುಬ್ಬಳ್ಳಿ	33.06	33.06	ಕಾರ್ಯನಿರ್ವಹಿಸುತ್ತಿದೆ
6	ಬಿಜಾಪುರ	ಬಸವನ ಬಾಗೇವಾಡಿ	27.00	37.93	ಕಾರ್ಯ ನಿರ್ವಹಣೆ ಪ್ರಾರಂಭಿಸ ಬೇಕಿದೆ
7	ಬಾಗಲ ಕೋಟೆ	ನವಗರ	44.00	38.74	ಸ್ಥಗಿತಗೊಂಡಿದೆ.
8	ಹಾವೇರಿ	ಹಾವೇರಿ	31.40	33.53	ಪ್ರತಿಕ್ರಿಯೆ ಇರುವುದಿಲ್ಲ
9	ರಾಣೆ ಬೆನ್ನೂರು	ರಾಣೆ ಬೆನ್ನೂರು	30.50	32.37	ಪ್ರತಿಕ್ರಿಯೆ ಇರುವುದಿಲ್ಲ
10	ಬಿಜಾಪುರ	ಬಿಜಾಪುರ ಜಲನಗರ ಬಡಾವಣೆ	21.88	22.80	ಕಾರ್ಯನಿರ್ವಹಿಸುತ್ತಿದೆ
11	ಗಂಗಾವತಿ	ಗಂಗಾವತಿ	25.00	29.93	ಕಾರ್ಯ ನಿರ್ವಹಣೆ ಪ್ರಾರಂಭಿಸ ಬೇಕಿದೆ
12	ಬೀದರ್	ಬೀದರ್	68.00	66.36	ಕಾರ್ಯ ನಿರ್ವಹಿಸುತ್ತಿದೆ

13	ಭದ್ರಾವತಿ	ಭದ್ರಾವತಿ	29.42	–	ಕಾರ್ಯ ನಿರ್ವಹಣೆ ಪ್ರಾರಂಭಿಸ ಬೇಕಿದೆ
14	ಶಹಪುರ	ಶಹಪುರ	25.00	18.29	ಕಾರ್ಯ ನಿರ್ವಹಣೆ ಪ್ರಾರಂಭಿಸ ಬೇಕಿದೆ.

ಅನುಬಂಧ– 2

ಕಳೆದ 2 ವರ್ಷಗಳಲ್ಲಿ ನಬಾರ್ಡ್ ಯೋಜನೆಯ ಮೂಲಕ ಪಡೆಯಲಾದ ಅನುದಾನಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಆರ್‌ಐಡಿ ಎಫ್ ಟ್ರಂಚ್	ಒಟ್ಟು ಕಾಮಗಾರಿಗಳು	ನಬಾರ್ಡ್‌ನಿಂದ ಅನುಮೋದನೆ ಯಾದ ದಿನಾಂಕ	ಮಂಜೂರಾದ ಅನುದಾನ ಮೊತ್ತ	ಬಿಡುಗಡೆಯಾದ ಮೊತ್ತ	ಷರಾ
1	ಆರ್‌ಐಡಿ ಎಫ್–14	31	03/12/2008	1000.00	–	
2	ಆರ್‌ಐ ಡಿ ಎಫ್–15	16	03/12/2009	500.00	–	

ಅನುಬಂಧ – 3

ಮೂಲಸೌಕರ್ಯಗಳನ್ನು ಒದಗಿಸುವ ಬಗ್ಗೆ ಸರ್ಕಾರದಿಂದ 2009–10ನೇ ಸಾಲಿಗೆ ಸಂಬಂಧಪಟ್ಟಂತೆ ವಿವಿಧ ಯೋಜನೆಗಳ ವಿವರ

(ರೂ. ಲಕ್ಷಗಳಲ್ಲಿ)

ಕ್ರ ಸಂ.	ಯೋಜನೆ ಹೆಸರು	ಒಟ್ಟು ಕಾಮಗಾರಿಗಳ ಸಂಖ್ಯೆ	ಒಟ್ಟಾರೆ ಯೋಜನಾ ಮೊತ್ತ	ಕೇಂದ್ರ/ರಾಜ್ಯ ಸರ್ಕಾರದಿಂದ ಮಂಜೂರಾದ ಅನುದಾನ	ಬಿಡುಗಡೆಯಾದ ಅನುದಾನದ ಮೊತ್ತ	ಷರಾ
1	ಆರ್‌ಐಡಿ ಎಫ್–15	16	500.00	450.00	–	ಕಾಮಗಾರಿಗಳನ್ನು ಪ್ರಾರಂಭಿಸಬೇಕಾಗಿದೆ

2	ರಾಷ್ಟ್ರೀಯ ತೋಟಗಾರಿಕಾ ಮಿಷನ್ (N.H.M)	19	5266.50	1246.37	1246.37	6 ಕಾಮಗಾರಿಗಳು ಪೂರ್ಣಗೊಂಡಿದೆ
3	ಗ್ರಾಮೀಣ ಭಂಡಾರ ಯೋಜನೆ	282	4339.00	1084.75	–	
4	ಡಿ.ಎಂ.ಐ ಯೋಜನೆ (D.M.I.)	16	12288.00	3072.00	–	
5	ಅಸೈಡ್ ಯೋಜನೆ (ASIDE)	02	26.30	18.40	–	ಟೆಂಡರ್ ಪ್ರಕ್ರಿಯೆಯಲ್ಲಿದೆ
6	ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ (R.K.V.Y)	45	1450.00	1450.00	1050.00	ಕಾಮಗಾರಿಗಳು ಪ್ರಗತಿಯಲ್ಲಿವೆ

ಮೂಲ ಸೌಕರ್ಯ ಅಭಿವೃದ್ಧಿ ಯೋಜನೆಗಳು

986 (1521) ಶ್ರೀ ಹ್ಯಾರಿಸ್ ಎನ್. ಎ. (ಶಾಂತಿ ನಗರ) : ಮಾನ್ಯ ಕೃಷಿ ಮಾರುಕಟ್ಟೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕೃಷಿ ಮಾರುಕಟ್ಟೆಗಳಲ್ಲಿ ಮೂಲ ಸೌಕರ್ಯಗಳ ಅಭಿವೃದ್ಧಿಗಾಗಿ ಸರ್ಕಾರ ಹಮ್ಮಿಕೊಂಡಿರುವ ಯೋಜನೆಗಳೇನು? (ವಿವರ ನೀಡುವುದು);

ಆ) ಮೂಲ ಸೌಕರ್ಯಗಳನ್ನು ವ್ಯವಸ್ಥೆಗೊಳಿಸಲು ಸರ್ಕಾರ ಎಷ್ಟು ಮೊತ್ತದ ಹಣವನ್ನು ವೆಚ್ಚ ಮಾಡಲುದ್ದೇಶಿಸಿದೆ? ಅಭಿವೃದ್ಧಿ ಕಾರ್ಯಗಳ ಪ್ರಗತಿಯ ವಿವರಗಳೇನು?

ಇ) ಕೃಷಿ ಮಾರುಕಟ್ಟೆಗಳಿಗೆ ಪೂರಕವಾಗಿ ಒಟ್ಟು ಎಷ್ಟು ಗೋದಾಮುಗಳನ್ನು ಸರ್ಕಾರ ನಿರ್ಮಿಸಿದೆ ನೂತನವಾಗಿ ನಿರ್ಮಿಸಲಿರುವ ಗೋದಾಮುಗಳೆಷ್ಟು? (ವಿವರ ನೀಡುವುದು);